ಕರ್ನಾಟಕ ಸರ್ಕಾರ

ಸೆಪ್ಟೆಂಬರ್ 3, 2016

## ಗೌರಿ – ಗಣೇಶ ಹಬ್ಬ :
## ರಾಜ್ಯದ ಜನತೆಗೆ ಮುಖ್ಯಮಂತ್ರಿ ಶುಭಾಶಯ

ಬೆಂಗಳೂರು, ಸೆಪ್ಟೆಂಬರ್ 3:

ಗೌರಿ ಮತ್ತು ಗಣೇಶ ಹಬ್ಬಗಳ ಸುಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದ ಜನತೆಗೆ ಶುಭ ಹಾರೈಸಿದ್ದಾರೆ.

ಗೌರಿ ಹಬ್ಬವು ತಾಯಿಯಲ್ಲಿ ಮಗನ ಮೇಲಿನ ಪುತ್ರ ವಾತ್ಸಲ್ಯಕ್ಕೆ ಹಾಗೂ ಗಣೇಶನ ಹಬ್ಬವು ಮಗನಲ್ಲಿ ತಾಯಿಯ ಮೇಲಿನ ಮಾತೃ ಭಕ್ತಿಗೆ ಧ್ಯೋತಕವಾಗಿದೆ. ಯಾವುದೇ ಕಾರ್ಯಚಟುವಟಿಕೆಯ ಶುಭಾರಂಭಕ್ಕೆ ವಿಘ್ನಗಳ ನಿವಾರಕ ವರಸಿದ್ಧಿ ವಿನಾಯಕನಿಗೆ ಮೊದಲ ಪೂಜೆ ಸಲ್ಲುತ್ತದೆ. ಶ್ರೀ ವಿಘ್ನೇಶ್ವರ ಸ್ವಾಮಿಯ ಕೃಪಾ ಕಟಾಕ್ಷ ಸದಾ ನಮ್ಮೆಲ್ಲರ ಮೇಲಿರಲಿ. ರಾಜ್ಯದ ಎಲ್ಲೆಡೆ ಅಭಿವೃದ್ಧಿ ಪಸರಿಸಲಿ. ರಾಜ್ಯವು ಸಮೃದ್ಧಿಯ ಪಥದಲ್ಲಿ ಮುನ್ನಡೆಯಲಿ ಎಂದು ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

**********

ಡಿ ಪಿ ಎಂ